# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ21.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಎ.ಎಸ್.ರಮೇಶ್ ಬಿನ್ ಲೇ.ಎ.ಆರ್.ಸಂಪಿಗೆರಾಯಪ್ಪ<br>38 ವರ್ಷ<br>ವ್ಯವಸಾಯ<br>ಅತ್ತಿಕಟ್ಟೆ |
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಎ.ಜಿ.ಎಸ್. ರವರಿಂದ

ಹೇಮಾವತಿ ನಾಲೆಗೆ ಭೂಸ್ವಾಧೀನ ಆಗಿರುವ ಜಮೀನಿನ ಸ.ನಂಃ 99/2 ಇರುತ್ತದೆ. ಸದರಿ ಸ.ನಂಃ ಜಮೀನು 25 ಗುಂಟೆ ಇದ್ದು ಅದನ್ನು ನನ್ನ ತಾಯಿ ಖರೀದಿ ಮಾಡಿರುತ್ತಾರೆ. ನನ್ನ ತಾಯಿ ಸದರಿ ಜಮೀನನ್ನು ಖರೀದಿ ಮಾಡುವಾಗಲೂ ಸಹ ಅದರ ಸ.ನಂಃ 99/2 ಇತ್ತು ಎನ್ನುತ್ತಾರೆ. ನನ್ನ ತಾಯಿ ಆ ಜಮೀನನ್ನು ಯಾರಿಂದ ಖರೀದಿ ಮಾಡಿದರು, ಯಾವ ವರ್ಷದಲ್ಲಿ ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಮ್ಮ ಸ.ನಂಃ 99/2 ರ ಜಮೀನಿನ ಪಕ್ಕದ ಪಶ್ಚಿಮದಲ್ಲಿ ಸ.ನಂಃ99 ಜಮೀನು ಇರುತ್ತದೆ. ನನಗೆ ಸ.ನಂ ಬಗ್ಗೆಯಾಗಲೀ , ವಿಸ್ತೀರ್ಣವಾಗಲೀ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.

2. ನನ್ನ ತಾಯಿಯ ತಂದೆಯ ಹೆಸರು ಶಿವಣ್ಣ ಎಂದರೆ ಸರಿ. ನನ್ನ ತಾತ ಶಿವಣ್ಣ ಪಟೇಲ್ ಮನೆತನದವರು ಹಾಗೂ ಅನುಕೂಲಸ್ಥ ಕುಟುಂಬದವರು ಎಂದರೆ ಸರಿ . ನನ್ನ ತಾಯಿಗೆ ಮೂರು ಜನ ಅಕ್ಕತಂಗಿಯರು. ನನ್ನ ತಾಯಿಗೆ ಸೀಳುತುಟಿ ಇರುತ್ತದೆ ಎಂದರೆ ಸರಿ. ಅದರಿಂದ ನನ್ನ ತಾತನಿಗೆ ನನ್ನ ತಾಯಿಯ ಮೇಲೆ ಅಧಿಕ ಪ್ರೀತಿ ವಾತ್ಸಲ್ಯ ಇತ್ತು ಎಂದರೆ ಸರಿ.

3. ದಿಃ 26-02-1992 ರಲ್ಲಿ ನನ್ನ ತಾಯಿ ದಾವಾಸ್ವತ್ತು ಸ.ನಂಃ99 /2 , 9 ಗುಂಟೆ ಜಮೀನನ್ನು ಕೃಷೋಜಿ ರಾವ್ , ಶ್ರೀನಿವಾಸರಾವ್ , ಪಾಂಡುರಾವ್ ಹಾಗೂ ಶಿವಾಜಿರಾವ್ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು. ಸ.ನಂಃ99 ಜಮೀನು ಒಟ್ಟು 5 ಎಕರೆ ಇದ್ದು ಆ ಪೈಕಿ ನನ್ನ ತಾಯಿ 2 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಲಾಗಿದ್ದು ಅದು ದಿಃ26-02-1992 ರ ಕ್ರಯಪತ್ರದ ನಕಲಾಗಿದ್ದು ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಅದರಲ್ಲಿನ ತನ್ನ ತಾಯಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಡಿ.1 (ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಕೃಷೋಜಿ ರಾವ್, ಶ್ರೀನಿವಾಸರಾವ್, ಪಾಂಡುರಾವ್ ಹಾಗೂ ಶಿವಾಜಿರಾವ್ ರವರೂ ಕೂಡ ನಿ,ಡಿ.1 ಕ್ಕೆ ಸಹಿ ಮಾಡಿದ್ದಾರೆ ಎಂದರೆ ಸರಿ. ನಿ.ಡಿ.1 ರಲ್ಲಿರುವ ಶೆಡ್ಯೂಲ್ ಸ್ವತ್ತಿನಲ್ಲಿ ಹೇಮಾವತಿ ನಾಲೆ ಹೋಗಿದ್ದು ಆ ಜಮೀನು ಮಾತ್ರ ಹೇಮಾವತಿ ನಾಲೆಗೆ ಭೂಸ್ವಾಧೀನ ಆಗಿದೆ ಎಂದರೆ ಸರ್. ದಾವಾಸ್ವತ್ತಿನ ಮೇಲೆ ಪರಿಹಾರದ ಹಣವನ್ನು ಕೇಳಿಕೊಳ್ಳುತ್ತಿದ್ದೇನೆ ಎಂದರೆ ಸರಿ. ನಿ.ಡಿ.1 ರಲ್ಲಿ ನನ್ನ ತಾಯಿ ಆಕೆಯ ತವರುಮನೆಯವರು ನೀಡಿದ ಹಣದಿಂದ ನಿ.ಡಿ.1 ರಲ್ಲಿನ ಜಮೀನನ್ನು ಖರೀದಿ ಮಾಡಿರುವುದಾಗಿ ನಮೂದಾಗಿದೆ ಎಂದರೆ ಸರಿ. ನನ್ನ ತಾಯಿ ಮೃತಪಟ್ಟಿದ್ದಾಳೆ ಎಂದರೆ ಸರಿ . ನನ್ನ ತಾಯಿ ಭೂಸ್ವಾಧೀನದ ಪರಿಹಾರದ ಮೊತ್ತವನ್ನುಪಡೆದುಕೊಂಡಿದ್ದಾರೆಎಂದರೆ ಸರಿ. ನಾನು ಈದಾವೆ ಹಾಕುವ ಮುಂಚೆಯೇ ನನ್ನ ತಾಯಿ ಪೂರ್ತಿ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾಳೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ